ಹೋಗಿ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಈ ಆಜ್ಞೆ ಭಯಾನಕವಾಗಿದೆ. ಈ ಆಜ್ಞೆಯಲ್ಲಿ ಕೃಷಿ ಭೂಮಿಯಲ್ಲಿ ವಾಸಕ್ಕೆ ಆಗಲಿ ಅಥವಾ ಬೇರೆ ಯಾವುದೇ ಉಪಯೋಗಕ್ಕಾಗಲಿ ಕಟ್ಟಡ ಕಟ್ಟಿರುವ ರೈತರುಗಳು ಪ್ರತಿ ಚದರ ಅಡಿಗೆ ೯ ರೂಪಾಯಿಯಿಂದ ೧೧–೫೦ ಪೈಸೆಯವರೆಗೆ ದಂಡವನ್ನು ತೆರಬೇಕಾಗುತ್ತದೆ ಅಂದರೆ ೪೦–೫೦ ಇರುವ ಒಂದು ಸಣ್ಣ ನಿವೇಶನದಲ್ಲಿ ಕಟ್ಟಿರುವ ಕಟ್ಟಡವನ್ನು ಸಕ್ರಮಗೊಳಿಸಬೇಕಾದಲ್ಲಿ ಈ ರೈತರುಗಳು ೧೧ ಸಾವಿರದಿಂದ ೧೫ ಸಾವಿರದವರೆಗೂ ದಂಡ ತೆರಬೇಕಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಇದೇ ಹಣಕ್ಕೆ ಒಂದು ಎಕರೆ ಭೂಮಿಯನ್ನು ಕೊಳ್ಳಬಹುದು. ಇಂತಹ ಆಜ್ಞೆ ಹೊರಡಿಸಿದ ಸರ್ಕಾರ ಕಟ್ಟಡಗಳಿರುವ ಪ್ರದೇಶ ಅಳತೆ ಮಾಡಿ ಗ್ರಾಮ ಲೆಕ್ಕಿಗರ ಮೂಲಕ ನೋಟೀಸ್‌ಗಳನ್ನು ನೀಡಿ ವಸೂಲಿ ಆರಂಭಿಸಿದೆ. ಈ ಕ್ರಮ ರೈತ ವಿರೋಧಿಯಾದದ್ದು. ಬಡಜನರಿಗೆ ಸಂಕಟಕಾರಿಯಾದದ್ದು. ಈ ಕ್ರಮವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಇಲ್ಲದಿದ್ದರೆ ಹೊಲಗಳಲ್ಲಿ ಕಟ್ಟಡಗಳನ್ನು ಕಟ್ಟಿದ ಹತ್ತಾರು ಸಾವಿರ ಮಂದಿ ರೈತರ ಪ್ರತಿಭಟನೆಯನ್ನು ಸರ್ಕಾರ ಎದುರಿಸಬೇಕಾಗಿ ಬರುತ್ತದೆಂದು ಎಚ್ಚರಿಕೆ ನೀಡಿ ಈ ಮಹತ್ವಪೂರ್ಣ ವಿಷಯವನ್ನು ಸದನಕ್ಕೆ ತರಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಕಾನೂನು ಪ್ರಕಾರ ಕ್ರಮ ತೆಗೆದು ಕೊಂಡಿದ್ದೇವೆ. ಆ ಕಾನೂನು ಇಲ್ಲೇ ಆಗಿದೆ. ನೀವೆ ಸದಸ್ಯರು ಈ ರೀತಿ ಮಾಡಬಾರದೆಂದು ಹೇಳಿದರೆ ಕಾನೂನನ್ನು ಬಿಟ್ಟು ಬೇರೆ ಕ್ರಮ ಕೈಗೊಳ್ಳುವುದಕ್ಕೆ ಅವಕಾಶ ಇಲ್ಲ. ಹಾಗೇನಾದರೂ ಇದ್ದರೆ ವಿಚಾರ ಮಾಡೋಣ.

10. ಶಹಪುರ ತಾಲ್ಲೂಕಿನ ಹಾರನಗೇರಾ ವ್ಯವಸಾಯ ಸೇವಾ ಸಹಕಾರ ಸಂಘದ 58 ಮಂದಿಗೆ ಸಾಲವನ್ನು ವಿತರಣೆ ಮಾಡದಿರುವುದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಗುಲ್ಬರ್ಗ ಜಿಲ್ಲೆ ಶಹಪುರ ತಾಲ್ಲೂಕಿನ ಹಾರನಗೇರಾ ವ್ಯವಸಾಯ ಸೇವಾ ಸಹಕಾರ ಸಂಘದ ೫೮ ಮಂದಿ ಸದಸ್ಯರು ಸಾಲ ವಂಚಿತರಾಗಿದ್ದು ಅವರಿಗೆ ೧೨–೬–೮೫ ರಂದು ಎನ್. ಸಿ. ಸ್ಟೇಟ್‌ಮೆಂಟ್, ಮಂಜೂರಾಯಿತು. ೧೫–೬–೮೫ ರಂದು ಸದಸ್ಯರಿಂದ ಪತ್ರ ವಗೈರೆ ಹಾಗೂ ಚೆಕ್ಕುಗಳಿಗೆ ಸಹಿ ತೆಗೆದುಕೊಳ್ಳಲಾಯಿತಾದರೂ ಸಾಲ ವಿತರಣೆ ಮಾಡಲಿಲ್ಲ. ಈ ವಿಷಯವನ್ನು ೨೬–೭–೮೫ ರಂದು ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದು ಅವರು ಎರಡು ದಿನಗಳೊಳಗೆ ಸಾಲ ಹಂಚುವಂತೆ ಆದೇಶ ನೀಡಿದ್ದಾಗ್ಯೂ ಈವರೆಗೂ ಸಾಲ ವಿತರಣೆ ಯಾಗಲಿಲ್ಲ. ೩–೮–೮೫ ರಂದು ಮೇಲ್ಕಂಡವರು ಪುನಃ ಜಿಲ್ಲಾಧಿಕಾರಿಯವರನ್ನು ನೋಡಿ ವಿಷಯ ತಿಳಿಸಿದ ನಂತರ ಜಿಲ್ಲಾಧಿಕಾರಿಯವರು ಗುಲ್ಬರ್ಗ ಉಪ ನೋಂದಣಾಧಿಕಾರಿಯವರಿಗೆ ಆದೇಶ ನೀಡಿ ದಿನಾಂಕ ೧೫–೮–೮೫ ರೊಳಗಾಗಿ ಸಾಲ ವಿತರಣೆ ಮಾಡಬೇಕೆಂದು ತಿಳಿಸಿದ್ದಾಗ್ಯೂ ಉಪ ನೋಂದಣಾಧಿಕಾರಿಯವರಾಗಲಿ ಸಂಬಂಧಪಟ್ಟ ಬ್ಯಾಂಕಿನವರಾಗಲಿ ಕ್ರಮ ತೆಗೆದುಕೊಳ್ಳದಿರುವುದರಿಂದ ಬರಗಾಲಕ್ಕೆ ಸಿಕ್ಕಿ ಬೇಸತ್ತಿರುವ ಮೇಲ್ಕಂಡ ರೈತರುಗಳಿಗೆ ಕೂಡಲೇ ಮಂಜೂರಾಗಿರುವ ಸಾಲವನ್ನು ಪಾವತಿ ಮಾಡುವಂತೆ ಸರ್ಕಾರದವರು ಆದೇಶ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಟೆಲಿಫೋನ್ ಮಾಡಿ ವಿತರಣೆ ಸಾಲ ವಿತರಣೆ ಆಗಿಲ್ಲವೆಂದು ಕೇಳಿ, ನಾಳೆ ಸದಸ್ಯರಿಗೆ ಉತ್ತರ ಒದಗಿಸುತ್ತೇನೆ.

(11) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಜಾಲಿಕೊಪ್ಪ ಗ್ರಾಮದ ನಿವಾಸಿಗಳ ಅಮರಣಾಂತ ಉಪವಾಸ ಮಾಡಿರುವುದು.

ಶ್ರೀ ಕೆ. ಪೆಚ್. ಪಾಟೀಲ್ (ಬಂಗಾರಪ್ಪ, ರಾಮಪ್ಪ, ಸ್ವಾಮಿರಾವ್, ಮಾಲಿಕಯ್ಯ, ಪುಟ್ಟ ಸ್ವಾಮಿ, ಮಲ್ಲಾರಿಗೌಡ ಎಸ್. ಪಾಟೀಲ್ ಇವರೆಲ್ಲರ ಪರವಾಗಿ).—ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಜಾಲಿಕೊಪ್ಪ ಗ್ರಾಮದ ನಿವಾಸಿಗಳಾದ ೧೨ ಮಂದಿ ಹರಿಜನರು ತಮ್ಮ ನ್ಯಾಯಪಾದ ಬೇಡಿಕೆಯಾದ ೧೩ ಎಕರೆ ಗ್ರಾಮ ಠಾಣ ಜಮೀನನ್ನು ಸಾಗುವಳಿಗಾಗಿ ಬಹಳ ಹಿಂದಿನಿಂದಲೂ ಕೋರುತ್ತಿದ್ದು ಸರಕಾರ ಈ ಬಗ್ಗೆ ಗಮನ ನೀಡದಿದ್ದುದರಿಂದ ಆಗಸ್ಟ್ ೧೫ ರಿಂದ ಅವರುಗಳು ಅಮರಣಾಂತರ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ೧೭–೮–೮೫ ರಂದು ಸಂಬಂಧಪಟ್ಟ ಅಧಿಕಾರಿಗಳು ಮೇಲ್ಕಂಡ ೧೩ ಎಕರೆ ಜಮೀನನ್ನು ಸ್ಮಶಾನಕ್ಕೆ ನೀಡಿರುವುದಾಗಿ ತಿಳಿಸಿದ್ದಾರೆ. ಜಾಲಿಕೊಪ್ಪ ಮತ್ತು ಆರವಳ್ಳಿ ಗ್ರಾಮಗಳು ತೀರಾ ಚಿಕ್ಕ ಗ್ರಾಮಗಳಿದ್ದು ಎರಡು ಎಕರೆಗಳಷ್ಟು ಜಮೀನನ್ನು ಸ್ಮಶಾನಕ್ಕೆ ಇಟ್ಟುಕೊಂಡು ಉಳಿದ ೧೧ ಎಕರೆ ಜಮೀನನ್ನು ಸಾಗುವಳಿಗೆ ಬಿಟ್ಟುಕೊಡಬೇಕೆಂದು ಉಪವಾಸ ಮಾಡುತ್ತಿ

ರುವ ಹರಿಜನರು ಅಧಿಕಾರಿಗಳನ್ನು ಕೋರಿದಾಗ್ಯೂ ಇನ್ನೂ ಯಾವ ಕ್ರಮವನ್ನು ಕೈಗೊಂಡಿರುವುದಿಲ್ಲ. ಉಪವಾಸ ಕೈಗೊಂಡಿರುವವರ ಪೈಕಿ ಳ ಮಂದಿಯ ಪರಿಸ್ಥಿತಿ ವಿಷಮಿಸಿದ್ದು ಅವರನ್ನು ಬೆಳಗಾವಿಯ ಆಸ್ಪತ್ರೆಗೆ ಸೇರಿಸಲಾಗಿದೆ. ಪರಿಸ್ಥಿತಿ ವಿಷಮಕ್ಕೆ ಹೋಗದಂತೆ ತಡೆಗಟ್ಟಿ ಉಪವಾಸ ಮಾಡುತ್ತಿರುವ ಹರಿಜನರ ಬೇಡಿಕೆಯನ್ನು ಈಡೇರಿಸುವಂತೆ ಸರ್ಕಾರದವರನ್ನು ಈ ಮೂಲಕ ಒತ್ತಾಯಿಸುತ್ತೇನೆ. ಈಗ ಬಂದ ವರದಿ ಪ್ರಕಾರ ಉಳಿದವರನ್ನು ಆಸ್ಪತ್ರೆಗೆ ಒಯ್ದಿದ್ದಾರೆಂದು ತಿಳಿದುಬಂದಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಹೇಳಿಕೆಯನ್ನು ನಾನು ಓದಿದ್ದೇನೆ. ತಕ್ಷಣ ಅಧಿಕಾರಿಗಳನ್ನು ಕಂಡು ಇದರ ಬಗ್ಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಾನು ದೂರವಾಣಿ ಮುಖಾಂತರ ಮಾತನಾಡುತ್ತೇನೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರಿಗಳಿಗೆ ಆದೇಶ ನೀಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ

(12) ತದಡಿ ಬಂದರಿನ ಪರಿಸರದಲ್ಲಿ ಶಾಲಾ ಕಟ್ಟಡದ ದುಸ್ಥಿತಿ

ಶ್ರೀ ಆರ್. ಎನ್. ನಾಯಕ್.—ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದ ಹತ್ತಿರ ತದಡಿ ಬಂದರಿನ ಪರಿಸರದಲ್ಲಿ ಶಾಲಾ ಕಟ್ಟಡದ ದುಸ್ಥಿತಿಯನ್ನು ಮಂಗಳಾರು ದಿನಪತ್ರಿಕೆವರದಿ ಮಾಡಿದೆ. ಶಾಲಾ ಕಟ್ಟಡದ ಅವ್ಯವಸ್ಥೆಯನ್ನು ಚಿತ್ರ ಸಹಿತ ವಿವರಿಸಲಾಗಿದೆ. ೭೩ ವರ್ಷ ದಷ್ಟು ಹಳೆಯದಾದ ಈ ಕಟ್ಟಡದಲ್ಲಿ ಶಾಲೆ ನಡೆಯುತ್ತಿದ್ದು ಶಾಲಾ ಕಟ್ಟಡ ಜೀರ್ಣಗೊಂಡಿದೆ. ಯಾವಾಗಲಾದರೂ ಕುಸಿದು ಬಿದ್ದು ಹೋಗಬಹುದಾದ ಪರಿಸ್ಥಿತಿಯಲ್ಲಿದೆ. ಶಾಲಾ ಕಟ್ಟಡದ ಗೋಡೆಗೆ ಗೆದ್ದಲು ಹತ್ತಿದ್ದು, ೩–೪ ಅಡಿ ಎತ್ತರಕ್ಕೆ ಹುತ್ತ ಬೆಳೆದಿದೆ. ಹಾವುಗಳಂಥ ವಿಷ ಜಂತುಗಳಿಗೆ ಈ ಶಾಲೆ ವಾಸಸ್ಥಳವಾಗಬಹುದಾದ ಸಾಧ್ಯತೆ ಇದೆ.

ತದಡಿ ಬಂದರು ಡೆನಿಡಾ ಸಹಾಯದಿಂದ ತೀವ್ರವಾಗಿ ಬೆಳೆಯುತ್ತಲಿದ್ದು ಸ್ವಲ್ಪ ಕಾಲದಲ್ಲಿಯೇ ತದಡಿ ದೊಡ್ಡ ಬಂದರು ಆಗುತ್ತದೆ. ಬೇರೆ ದೇಶದವರು ತದಡಿ ಊರಿಗೆ ಕೋಟಿಗಟ್ಟಲೆ ರೂಪಾಯಿ ಗಳನ್ನು ಖರ್ಚು ಮಾಡುತ್ತಿರುವಾಗ ನಮ್ಮ ಸರ್ಕಾರ ಒಂದು ಶಾಲಾ ಕಟ್ಟಡ ಕಟ್ಟಿಸುತ್ತಿಲ್ಲವೆಂದರೆ ದುರ ದೃಷ್ಟಕರ. ಶಾಲಾ ಕಟ್ಟಡ ಇಂಥ ಪರಿಸ್ಥಿತಿಗೆ ಬರುವವರೆಗೆ ಇಲಾಖೆಯ ಅಧಿಕಾರಿಗಳು ಏನು ಮಾಡಿ ದರು? ನಿದ್ರಿಸುತ್ತಿದ್ದರೆ? ಅಥವಾ ಈ ತನಕ ಶಾಲೆಯ ತಪಾಸಣೆಯನ್ನೇ ಮಾಡಿಲ್ಲವೆ ? ಇದು ಇಲಾಖಾ ಅಧಿಕಾರಿಗಳ ವ್ಯವಸ್ಥಿತವಾದ ನಿರ್ಲಕ್ಷ್ಯಕ್ಕೆ ದೊಡ್ಡ ಉದಾಹರಣೆಯಾಗಿದೆ. ಶಾಲೆಯು ಈ ಪರಿಸ್ಥಿತಿಯನ್ನು ಯಾರು ಸರ್ಕಾರದ ಗಮನಕ್ಕೆ ತಂದಿಲ್ಲವೆ ಎನ್ನುವುದೇ ಆಶ್ಚರ್ಯ. ಕಾರಣ ಶಾಲೆ ಕುಸಿದು ಬಿದ್ದು ಭಾರಿ ಪ್ರಾಣಾಪಾಯ ಸಂಭವಿಸುವ ಪೂರ್ವದಲ್ಲಿಯೇ ಅಲ್ಲಿ ಕಟ್ಟಡ ಕಟ್ಟಿಸುವ ಬಗ್ಗೆ ಅತಿ ಅವಶ್ಯಕವಾಗಿ ಶೀಘ್ರ ಕ್ರಮ ಕೈ ಗೊಳ್ಳಬೇಕು.

ಶಾಲಾ ಕಟ್ಟಡದ ಚಿತ್ರವಿರುವ ಮಂಗಳಾರು ಪತ್ರಿಕೆಯನ್ನು ಅಧ್ಯಕ್ಷರಿಗೆ ತಲುಪಿಸುತ್ತೇನೆ.

ಶ್ರೀ ಗೋವಿಂದ ಗೌಡ (ಪ್ರಾಥಮಿಕ ಶಿಕ್ಷಣ ಖಾತೆ ರಾಜ್ಯ ಸಚಿವರು).—

ಮಾನ್ಯ ಅಧ್ಯಕ್ಷರೆ, ಈಗತಾನೆ ಸರ್ಕಾರದ ಗಮನವನ್ನು ಮಾನ್ಯ ಸ್ನೇಹಿತರು ಸೆಳೆದಿದ್ದಾರೆ. ಸಂಬಂಧಪಟ್ಟ ಉಪನಿರ್ದೇಶಕರಿಂದ ಮಾಹಿತಿ ತರಿಸಿಕೊಂಡು ಸೂಕ್ತ ವ್ಯವಸ್ಥೆ ಮಾಡುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾಹಿತಿ ಹೊಸದಾಗಿ ತರಿಸಬೇಕಾಗಿಲ್ಲ. ಅದು ಪತ್ರಿಕೆಯಲ್ಲೇ ಬಂದಿದೆ. ತಾವು ಕ್ರಮ ಕೈಕೊಳ್ಳಿ.

ಅರಣ್ಯ ಇಲಾಖೆಗೆ ಸೇರಿದ ಏಲಕ್ಕಿ ಸಾಗುವಳಿ ಮೇಲೆಗಳು.

ಶ್ರೀ ಡಿ. ಎ. ಚನ್ನಪ್ಪ.—ಅರಣ್ಯ ಇಲಾಖೆಗೆ ಸೇರಿದ ಏಲಕ್ಕಿ ಸಾಗುವಳಿ ಮೇಲೆಗಳನ್ನು ಆಯಾಯ ಸ್ಥಳದಲ್ಲಿನ ಜನರಿಗೆ ೨೧ ವರ್ಷಗಳ ಗೇಣಿಗೆ ಕೊಡುತ್ತಿದ್ದುದು ಇದುವರೆಗೂ ಅನೂಚಾನವಾಗಿ ನಡೆದು ಕೊಂಡು ಬರುತ್ತಿದ್ದ ಪದ್ಧತಿ. ಇತ್ತೀಚೆಗೆ ಈ ಪದ್ಧತಿಯನ್ನು ತಪ್ಪಿಸಿ ಒಂದು ವರ್ಷಕ್ಕೆ ಗೇಣಿಗೆ ಕೊಟ್ಟು ಕಂದಾಯ ತೆಗೆದುಕೊಂಡು ಏಲಕ್ಕಿ ಫಸಲನ್ನು ಅವರಿಗೇ ಬಿಡುತ್ತಿದ್ದರು. ಈ ವರ್ಷ ಈ ಪದ್ಧತಿಯನ್ನು ತಪ್ಪಿಸಿ ಅರಣ್ಯ ಇಲಾಖೆಯ ಅಧಿಕಾರಿಗಳು ಹೊರಗಿನಿಂದ ಕೂಲಿಯಾಳುಗಳನ್ನು ಕರೆದುಕೊಂಡು ಬಂದ್ದಿ